# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಮತ್ತು ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರಿಗೆ ನೀಡಲಾಗುತ್ತಿರುವ ಮಾಸಿಕ ಗೌರವಧನವನ್ನು ಹೆಚ್ಚಿಸುವ ಬಗ್ಗೆ

**ಓದಲಾಗಿದೆ:-**

1.ದಿನಾಂಕ:16.8.2007ರ ಸರ್ಕಾರಿ ಆದೇಶ ಸಂಖ್ಯೆ:ಮಮಇ 237 ಪಿಹೆಚ್‌ಪಿ 2007

2.ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ದಿ:20.04.2012 ಮತ್ತು 27.11.2012ರ ಪತ್ರ ಸಂಖ್ಯೆ:ನಿಅಕಇ/ಸಿ.03/ಗ್ರಾ.ಪು. ಯೋ/ 2011-12/204/3290

**ಪ್ರಸ್ತಾವನೆ: -**

ಮೇಲೆ (1)ರಲ್ಲಿ ಓದಲಾದ ದಿ:16.8.2007ರ ಸರ್ಕಾರಿ ಆದೇಶದಲ್ಲಿ 2007-08ನೇ ಸಾಲಿನಿಂದ NRPRD ಯೋಜನೆಯನ್ನು ಪುನರ್ ಪರಿಶೀಲಿಸಿ ಹೊಸ ಮಾರ್ಗಸೂಚಿಗಳೊಂದಿಗೆ ಅಂಗವಿಕಲರಿಗಾಗಿ ಗ್ರಾಮೀಣ ಪುನರ್ವಸತಿ ಕಾರ್ಯಕ್ರಮವೆಂಬ ಹೊಸ ಯೋಜನೆಯನ್ನು ಜಾರಿಗೊಳಿಸಲು ಮಂಜೂರಾತಿ ನೀಡಲಾಗಿದೆ.

ಮೇಲೆ (2)ರಲ್ಲಿ ಓದಲಾದ ದಿ:20.04.2012 ಮತ್ತು 27.11.2012 ರ ಪತ್ರಗಳಲ್ಲಿ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು ದಿ:16.8.2007ರ ಸರ್ಕಾರಿ ಆದೇಶದಲ್ಲಿ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತೆರಿಗೆ(MRW) ಮಾಹೆಯಾನ ರೂ.1800/- ಗಳ ಗೌರವಧನ ಹಾಗೂ ರೂ.200/-ಗಳ ಪ್ರವಾಸ, ಲೇಖನ ಸಾಮಗ್ರಿ ವೆಚ್ಚವನ್ನು ನೀಡಲು ಹಾಗೂ ಗ್ರಾಮೀಣ ಪುನರ್ವಸತಿ ಕಾರ್ಯಕರ್ತೆರಿಗೆ (VRW) ಮಾಹೆಯಾನ ರೂ.700/-ಗಳ ಗೌರವಧನ ಮತ್ತು ರೂ.50/-ಗಳ ಪ್ರವಾಸ, ಲೇಖನ ಸಾಮಗ್ರಿ ವೆಚ್ಚವನ್ನು ಒದಗಿಸಲು ಆದೇಶಿಸಲಾಗಿರುತ್ತದೆ. ಸದರಿ ಕಾರ್ಯಕರ್ತರ ಕಾರ್ಯವೈಖರಿಯ ಬಗ್ಗೆ ಮೌಲ್ಯಮಾಪನ ಮಾಡಿಸಲಾಗಿದ್ದು, ಮೌಲ್ಯಮಾಪನ ವರದಿಯನ್ವಯ MRW ಮತ್ತು VRWಗಳ ಕಾರ್ಯನಿರ್ವಹಣೆ ಸಮರ್ಪಕವಾಗಿದೆ. ಗ್ರಾಮೀಣ ಪ್ರದೇಶದ ವಿಕಲಚೇತನರಿಗೆ ಸರ್ಕಾರದ ವಿವಿಧ ಯೋಜನೆಗಳನ್ನು ತಲುಪಿಸಲು ಮತ್ತು ವಿಕಲಚೇತನರಿಗೆ ಸ್ವಯಂ ಉದ್ಯೋಗ ಮತ್ತು ಇತರ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಇವರ ಪಾತ್ರ ಮುಖ್ಯವಾಗಿದೆ. ಅವರಿಗೆ ನೀಡುತ್ತಿರುವ ಗೌರವಧನ ಅತ್ಯಾಲ್ಪವಾಗಿದ್ದು, ಅಷ್ಟು ಅಲ್ಪ ಮೊತ್ತದಲ್ಲಿ ಅವರು ಎಲ್ಲ ಗ್ರಾಮಗಳಿಗೆ ಭೇಟಿ ನೀಡಿ ಕಾರ್ಯನಿರ್ವಹಿಸುವುದು ಕಷ್ಟಸಾಧ್ಯವಾಗಿದೆ. ಇದೇ ಅಭಿಪ್ರಾಯ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳಿಂದಲೂ ವ್ಯಕ್ತವಾಗಿದೆ. ಕಡಿಮೆ ಗೌರವಧನದಿಂದಾಗಿ VRW ಮತ್ತು MRW ಗಳು ಕೆಲಸದಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ ಎಂದು ಕೂಡ ಹೇಳಲಾಗಿದೆ. ಇಲಾಖೆಯಲ್ಲಿ ತಾಲ್ಲೂಕು ಮತ್ತು ಗ್ರಾಮ ಮಟ್ಟದ ಸಿಬ್ಬಂದಿ ಇರದೇ ಇರುವ ಕಾರಣ ಇಲಾಖೆಯ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ VRW ಮತ್ತು MRWಗಳ ಮೇಲೆಯೇ ಅವಲಂಬನೆಯಾಗುವಂತಾಗಿದೆ. ಗೌರವಧನ ಕಡಿಮೆಯಿರುವ ಕಾರಣ ಬಹಳಷ್ಟು ಗ್ರಾಮ ಪಂಚಾಯತ್ತಿಗಳಲ್ಲಿ VRW ಕೆಲಸ ಮಾಡಲು ಯಾರೂ ಮುಂದೆ ಬರದೇ ಒಟ್ಟು 5628 ಗ್ರಾಮ ಪಂಚಾಯಿತಿಗಳ ಪೈಕಿ ಸುಮಾರು 1026 ಗ್ರಾಮ ಪಂಚಾಯಿತಿಗಳಲ್ಲಿ VRWಗಳ ನೇಮಕವಾಗಿಲ್ಲವೆಂದು ತಿಳಿಸಿ ಆದುದರಿಂದ VRW ಮತ್ತು MRWಗಳ ಗೌರವಧನವನ್ನು ಹೆಚ್ಚಿಸುವುದು ಅಗತ್ಯವಾಗಿರುತ್ತದೆಯೆಂದು ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ:ಮಮಇ 150 ಪಿಹೆಚ್‌ಪಿ 2012**

**ಬೆಂಗಳೂರು, ದಿನಾಂಕ: 20.12.2012**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ದಿನಾಂಕ:16.8.2007ರ ಸರ್ಕಾರಿ ಆದೇಶ ಸಂಖ್ಯೆ: ಮಮಇ 237 ಪಿಹೆಚ್‌ಪಿ 2007 ರಲ್ಲಿ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಿಗೆ ಹಾಗೂ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರಿಗೆ ನಿಗದಿಪಡಿಸಿರುವ ಗೌರವಧನವನ್ನು ಪರಿಷ್ಕರಿಸಿ, ಪ್ರವಾಸ, ಲೇಖನ ಸಾಮಗ್ರಿ ವೆಚ್ಚವನ್ನೊಳಗೊಂಡಂತೆ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಿಗೆ ಮಾಸಿಕ ಗೌರವಧನವನ್ನು ರೂ.1,500/- (ಒಂದು ಸಾವಿರದ ಐದು-ನೂರು ರೂಪಾಯಿಗಳು ಮಾತ್ರ) ಹಾಗೂ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರಿಗೆ ಮಾಸಿಕ.ಗೌರವಧನವನ್ನು ರೂ.4000/- (ನಾಲ್ಕು ಸಾವಿರ ರೂಪಾಯಿಗಳು ಮಾತ್ರ) ಗಳಿಗೆ ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಹೆಚ್ಚಿಸಿ ಆದೇಶಿಸಲಾಗಿದೆ..

ಮೇಲ್ಕಂಡಂತೆ VRW ಮತ್ತು MRWಗಳ ಗೌರವಧನವನ್ನು ಹೆಚ್ಚಿಸಿರುವುದನ್ನು ಹೊರತುಪಡಿಸಿ, ದಿನಾಂಕ:16.8.2007ರ ಸರ್ಕಾರಿ ಆದೇಶ ಸಂಖ್ಯೆ:ಮಮಇ 237 ಪಿಹೆಚ್‌ಪಿ 2007 ರಲ್ಲಿ ಒಳಗೊಂಡಿರುವ ಇತರೆ ಎಲ್ಲ ಮಾರ್ಗಸೂಚಿಗಳನ್ನು ಯಥಾವತ್ತಾಗಿ ಪಾಲಿಸತಕ್ಕದ್ದು.

ಈ ವೆಚ್ಚವನ್ನು 2012-13ನೇ ಸಾಲಿನಲ್ಲಿ ಅಂಗವಿಕಲರಿಗಾಗಿ ಗ್ರಾಮೀಣ ಪುನರ್ವಸತಿ ಯೋಜನೆಗೆ ಲೆಕ್ಕ ಶೀರ್ಷಿಕೆ:2235-02-101-0-53 ರಡಿಯಲ್ಲಿ ಒದಗಿಸಿರುವ ಮೊತ್ತದಲ್ಲಿ ಭರಿಸತಕ್ಕದ್ದು. ಹಾಗೂ 2013-14ನೇ ಸಾಲಿನಿಂದ ಈ ವೆಚ್ಚವನ್ನು ಭರಿಸಲು ಬೇಕಾಗುವ ಅನುದಾನವನ್ನು ನಿಯಮಾನುಸಾರವಾಗಿ ಒದಗಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ದಿ:23.11.2012 ರ ಟಿಪ್ಪಣಿ ಸಂಖ್ಯೆ:ಆಇ 584 ವೆಚ್ಚ-3/2012 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

20-12

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.

**ಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವಂತೆ ಹಾಗೂ ಆದೇಶದ 250 ಪ್ರತಿಗಳನ್ನು ಒದಗಿಸುವಂತೆ ಕೋರಲಾಗಿದೆ.

ಪ್ರತಿಯನ್ನು:-

1.ಮಹಾಲೇಖಪಾಲರು (ಎ ಮತ್ತು ಇ)ಕರ್ನಾಟಕ, ಬೆಂಗಳೂರು.

2.ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು.

3.ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

4.ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

5.ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಪೋಡಿಯಂ ಬ್ಲಾಕ್, ಸರ್.ಎಂ.ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.

6.ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು (ನಿರ್ದೇಶಕರ ಮುಖಾಂತರ).

7.ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (ನಿರ್ದೇಶಕರ ಮುಖಾಂತರ).

8.ಎಲ್ಲಾ ತಾಲ್ಲೂಕು ಕಾರ್ಯಕಾರಿ ನಿರ್ವಹಣಾಧಿಕಾರಿಗಳು (ನಿರ್ದೇಶಕರ ಮುಖಾಂತರ).

9.ಎಲ್ಲಾ ಜಿಲ್ಲೆಯ ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ನಿರ್ದೇಶಕರ ಮುಖಾಂತರ).

10.ಎಲ್ಲಾ ಜಿಲ್ಲೆಯ ಅಂಗವಿಕಲರ ಕಲ್ಯಾಣಾಧಿಕಾರಿಗಳು (ನಿರ್ದೇಶಕರ ಮುಖಾಂತರ).

11.ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು (ನಿರ್ದೇಶಕರ ಮುಖಾಂತರ).

12.ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.